# ನಿಮ್ಮೊಡನೆ

## ಕ್ರೀಡಾಪಟುಗಳ ಲಜ್ಜೆಗೇಡಿತನ

ಕಾಮನ್‌ವೆಲ್ತ್ ಕ್ರೀಡಾಕೂಟ ಆರಂಭವಾಗುವುದಕ್ಕೆ ಒಂದೆಡೆ ಕ್ಷಣಗಣನೆ ನಡೆದಿರುವಂತೆಯೇ ಇನ್ನೊಂದೆಡೆ ಕ್ರೀಡಾಪಟುಗಳ ಉದ್ದೀಪನ ಮದ್ದು ಸೇವನೆಯ ಹಗರಣಗಳು ಬಯಲಿಗೆ ಬಂದಿವೆ. ಹತ್ತಕ್ಕೂ ಹೆಚ್ಚು ಕ್ರೀಡಾಪಟುಗಳು ಉದ್ದೀಪನಾ ಮದ್ದು ಸೇವಿಸಿರುವುದು ವೈದ್ಯಕೀಯ ತನಿಖೆಯಿಂದ ದೃಢಪಟ್ಟಿದೆ. ಇದೇ ಮೊದಲ ಬಾರಿಗೆ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಅತಿ ದೊಡ್ಡ ಸ್ವದೇಶಿ ತಂಡವನ್ನು ಆಯ್ಕೆ ಮಾಡಿದ್ದೇವೆ. 21 ಕುಸ್ತಿಪಟುಗಳು ಮತ್ತು 90 ಅಥ್ಲೀಟ್‌ಗಳ ಈ ತಂಡ ಭಾರತಕ್ಕೆ ಹಲವು ಕ್ರೀಡೆಗಳಲ್ಲಿ ಪದಕಗಳನ್ನು ಗೆದ್ದುಕೊಡುವ ನಿರೀಕ್ಷೆ ಕೂಡಾ ಕ್ರೀಡಾವಲಯದಲ್ಲಿದೆ. ಆದರೆ ಆರಂಭದಲ್ಲೇ ಒಬ್ಬೊಬ್ಬರಾಗಿ ನಮ್ಮ ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವಿಸಿ ಸಿಕ್ಕು ಬೀಳುತ್ತಿರುವುದು ವಿಷಾದದ ಸಂಗತಿ. ಕಾಮನ್‌ವೆಲ್ತ್ ಕ್ರೀಡಾಕೂಟದ ಆತಿಥ್ಯ ವಹಿಸುವುದು ಗೌರವದ ವಿಷಯ. ಹಾಗೆಯೇ ನಮ್ಮ ದೇಶದಲ್ಲೇ ಕ್ರೀಡಾಕೂಟ ನಡೆಯುವಾಗ ಅತಿ ಹೆಚ್ಚು ಪದಕಗಳನ್ನು ಗಳಿಸಬೇಕೆಂಬ ಆತುರ ಇರುವುದೂ ಸಹಜ. ಆದರೆ ಪದಕಗಳನ್ನು ನೇರ ಮಾರ್ಗದ ಸಾಧನೆಯಿಂದ ಗೌರವಪೂರ್ವಕವಾಗಿ ಪಡೆಯಬೇಕೇ ಹೊರತು, ದೇಶದ ಮಾನ ಕಳೆಯುವ ಕೆಲಸ ಮಾಡಬಾರದು.

ಕುಸ್ತಿ, ವೇಟ್‌ಲಿಫ್ಟಿಂಗ್ ಮತ್ತು ಅಥ್ಲೆಟಿಕ್– ಹೀಗೆ ಎಲ್ಲ ವಿಭಾಗದ ಕ್ರೀಡಾಪಟುಗಳೂ ಉದ್ದೀಪನ ಮದ್ದು ಸೇವಿಸಿರುವುದು ಗೊತ್ತಾಗಿದೆ. ಕುಸ್ತಿಯಲ್ಲಂತೂ ಘಟಾನುಘಟಿಗಳು ಸಿಕ್ಕು ಬಿದ್ದಿದ್ದಾರೆ. ಅರ್ಜುನ ಪ್ರಶಸ್ತಿ ವಿಜೇತ ರಾಜೀವ್ ತೋಮರ್, ಮಹಿಳಾ ಕುಸ್ತಿಪಟು ಗುರುಶರಣ್ ಪ್ರೀತ್, ಜತೆಗೆ ಸುಮಿತ್ ಮತ್ತು ಮೌಸಮ್ ಕತ್ರಿ ಎಲ್ಲರೂ ಪದಕದ ನಿರೀಕ್ಷೆ ಇದ್ದವರೇ. ಷಾಟ್‌ಪಟ್‌ನಲ್ಲಿ ಪದಕ ಗ್ಯಾರಂಟಿ ಎನ್ನುತ್ತಿದ್ದ ಸೌರವ್ ವಿಜ್, ಡಿಸ್ಕಸ್ ಥ್ರೋ ಪಟು ಆಕಾಶ್ ಅಂಟಿಲ್ ಅವರೂ ಉದ್ದೀಪನ ಮದ್ದು ಸೇವಿಸಿರುವುದು ಖಚಿತವಾಗಿದೆ. ಆಗಸ್ಟ್‌ನಲ್ಲಿ ಆಯ್ಕೆ ಟ್ರಯಲ್ ವೇಳೆಗೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ಈ ಪರೀಕ್ಷೆ ನಡೆಸಿತ್ತು. ಮೊದಲ ಹಂತದ ಪರೀಕ್ಷೆಯಲ್ಲಿ ಫಲಿತಾಂಶ 'ಪಾಸಿಟಿವ್' ಬಂದಾಗ, ಎರಡನೇ ಹಂತದಲ್ಲಿ ಬಚಾವಾಗುವ ನಿರೀಕ್ಷೆಯನ್ನು ಕೆಲವರು ವ್ಯಕ್ತಪಡಿಸಿದ್ದರು. ಆದರೆ ಎರಡನೆ ಹಂತದ 'ಬಿ' ಪರೀಕ್ಷೆಯಲ್ಲೂ ಈ ಕ್ರೀಡಾಪಟುಗಳ ವಿರುದ್ಧವೇ ವರದಿ ಬಂದಿದೆ. ಸದ್ಯಕ್ಕೆ ಭಾರತೀಯ ಕುಸ್ತಿ ಫೆಡರೇಶನ್ ನಾಲ್ವರನ್ನು ಅಮಾನತು ಮಾಡಿದೆ. ನಿವೃತ್ತ ಸೆಶನ್ಸ್ ನ್ಯಾಯಾಧೀಶರ ನೇತೃತ್ವದ ಮದ್ದು ತಡೆ ಶಿಸ್ತು ಸಮಿತಿಯ ಮುಂದೆ ಇವರ ವಿಚಾರಣೆ ನಡೆಯಲಿದ್ದು ಆ ಬಳಿಕ ಶಿಕ್ಷೆ ಪ್ರಕಟವಾಗಲಿದೆ.

ಹಾಗೆ ನೋಡಿದರೆ ಉದ್ದೀಪನಾ ಮದ್ದು ಸೇವಿಸಿ ನಮ್ಮ ಕ್ರೀಡಾಪಟುಗಳು ಸಿಕ್ಕು ಬೀಳುತ್ತಿರುವುದು ಇದೇ ಮೊದಲಲ್ಲ. ವಿದೇಶಗಳಲ್ಲಿ ಈ ಹಿಂದೆ ನಡೆದ ಕ್ರೀಡಾಕೂಟಗಳಲ್ಲೂ ನಮ್ಮ ವೇಟ್‌ಲಿಫ್ಟರ್‌ಗಳು ಸಿಕ್ಕುಬಿದ್ದಿದ್ದಾರೆ. 2004ರ ಅಥೆನ್ಸ್ ಅಥ್ಲೆಟಿಕ್ ಒಲಿಂಪಿಕ್ಸ್‌ಗೂ ಮುನ್ನ ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ಸಿಕ್ಕುಬಿದ್ದು ಎರಡು ವರ್ಷಗಳ ಅವಧಿಗೆ ನಿಷೇಧ ಎದುರಿಸಿದ್ದ ವೇಟ್‌ಲಿಫ್ಟರ್ ಸನಮಚು ಚಾನು ಈ ಸಲ ಮತ್ತೆ ಉದ್ದೀಪನ ಮದ್ದು ಸೇವಿಸಿದ್ದು ಖಚಿತವಾಗಿದೆ. ಎರಡು ವರ್ಷಗಳ ನಿಷೇಧದ ಬಳಿಕ ಮರಳಿ ಬಂದಿರುವ ಚಾನು ಮತ್ತೆ ಅದೇ ಚಾಳಿಗೆ ಬಿದ್ದಿರುವುದು ನಾಚಿಕೆಗೇಡಿನ ಸಂಗತಿ. ಚಾನು ಮತ್ತು ತೋಮರ್‌ರಂತಹ ಅರ್ಜುನ ಪ್ರಶಸ್ತಿ ವಿಜೇತರೇ ಈ ರೀತಿ ಅಡ್ಡ ಹಾದಿ ಹಿಡಿದಿರುವುದನ್ನು ನೋಡಿದರೆ ಈ ನಿಟ್ಟಿನಲ್ಲಿ ಇನ್ನಷ್ಟು ಕಠಿಣ ಶಿಕ್ಷಾಕ್ರಮಗಳನ್ನು ಜರುಗಿಸಬೇಕಾದ ಅಗತ್ಯ ಎದ್ದು ಕಾಣುತ್ತಿದೆ. ದೇಶದ ಹೆಮ್ಮೆಯ ಕ್ರೀಡಾಪಟುಗಳನ್ನು ಗುರುತಿಸಿ ನೀಡುತ್ತಿರುವ ಅರ್ಜುನ ಪ್ರಶಸ್ತಿಯ ತೂಕವೂ ಇಂತಹ ವಿದ್ಯಮಾನಗಳಿಂದಾಗಿ ಕಡಿಮೆಯಾಗುತ್ತಿದೆ. ಉದ್ದೀಪನ ಮದ್ದು ಸೇವಿಸಿ ಸಿಕ್ಕುಬಿದ್ದಿರುವ ಈ ಕ್ರೀಡಾಪಟುಗಳಿಂದ ಅರ್ಜುನ ಪ್ರಶಸ್ತಿಯನ್ನು ಕಸಿದುಕೊಳ್ಳುವಂತಹ ಕಠಿಣ ಕ್ರಮದ ಬಗ್ಗೆಯೂ ಕ್ರೀಡಾ ಇಲಾಖೆ ಯೋಚಿಸಬೇಕಿದೆ.

ವೈದ್ಯಕೀಯ ಪರೀಕ್ಷೆಗಳು ಈಗ ಹಿಂದೆಂದಿಗಿಂತ ನಿಖರ ಹಾಗೂ ಕಠಿಣವಾಗಿರುವುದರಿಂದ ಕ್ರೀಡಾಪಟುಗಳು ಹಿಂದಿನಂತೆ ಯಾರನ್ನೂ ವಂಚಿಸಲು ಸಾಧ್ಯವಿಲ್ಲ. ಕಾಮನ್‌ವೆಲ್ತ್ ಕ್ರೀಡಾಕೂಟ ಸಂಘಟನಾ ಸಮಿತಿ ಉದ್ದೀಪನಾ ಮದ್ದು ತಡೆಯ ವಿಷಯದಲ್ಲಿ ಕಠಿಣ ನಿಯಮಗಳನ್ನು ರೂಪಿಸಿರುವುದು ಸ್ವಾಗತಾರ್ಹ. ಇದರ ಅರಿವಿದ್ದೂ ಕ್ರೀಡಾಪಟುಗಳು ಹುಂಬ ಧೈರ್ಯ ಪ್ರದರ್ಶಿಸುತ್ತಿರುವುದು ಅಕ್ಷಮ್ಯ. 'ಕ್ರೀಡಾಪಟುಗಳಿಗೆ ಔಷಧಿ ಸೇವನೆ ಬಗ್ಗೆ ಶಿಕ್ಷಣ ನೀಡಬೇಕಾದ ಹೊಣೆಗಾರಿಕೆ ಇದೆ' ಎಂದು ಕ್ರೀಡಾಸಚಿವ ಗಿಲ್ ಹೇಳಿದ್ದಾರೆ. ಕೆಲವು ಔಷಧಿಗಳನ್ನು ನಿಷೇಧಿತ ಔಷಧಿಗಳ ಪಟ್ಟಿಗೆ ಹೊಸತಾಗಿ ಸೇರಿಸಿದ್ದರಿಂದ ಹೊಸ ಕ್ರೀಡಾಪಟುಗಳಿಗೆ ಗೊಂದಲ ಇರಬಹುದು. ಆದರೆ ಹಲವು ವರ್ಷಗಳಿಂದ ಕ್ರೀಡಾಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವ ಹಳಬರಿಗೆ ಏನಾಗಿದೆ? ದೇಶದ ಗೌರವ ಮಣ್ಣುಪಾಲು ಮಾಡುವ ಇಂತಹ ಕ್ರೀಡಾಪಟುಗಳಿಗೆ ಆಜೀವ ನಿಷೇಧ ಹೇರಿದಷ್ಟಕ್ಕೆ ಸಮಸ್ಯೆ ಬಗೆಹರಿಯುವುದಿಲ್ಲ. ಇನ್ನಷ್ಟು ಕಠಿಣ ಶಿಕ್ಷೆ ವಿಧಿಸಬೇಕಿದೆ.

■ ಬಿ.ಎಂ. ಹನೀಫ್

ವೈದ್ಯಕೀಯ ಪರೀಕ್ಷೆಗಳು ಈಗ ಹಿಂದೆಂದಿಗಿಂತ ನಿಖರ ಹಾಗೂ ಕಠಿಣ ವಾಗಿರುವುದರಿಂದ ಕ್ರೀಡಾಪಟುಗಳು ಹಿಂದಿನಂತೆ ಯಾರನ್ನೂ ವಂಚಿಸಲು ಸಾಧ್ಯವಿಲ್ಲ. ಕಾಮನ್‌ವೆಲ್ತ್ ಕ್ರೀಡಾಕೂಟ ಸಂಘಟನಾ ಸಮಿತಿ ಉದ್ದೀಪನಾ ಮದ್ದು ತಡೆಯ ವಿಷಯದಲ್ಲಿ ಕಠಿಣ ನಿಯಮಗಳನ್ನು ರೂಪಿಸಿರುವುದು ಸ್ವಾಗತಾರ್ಹ. ಇದರ ಅರಿವಿದ್ದೂ ಕ್ರೀಡಾಪಟುಗಳು ಹುಂಬ ಧೈರ್ಯ ಪ್ರದರ್ಶಿಸುತ್ತಿರುವುದು ಅಕ್ಷಮ್ಯ. 'ಕ್ರೀಡಾಪಟುಗಳಿಗೆ ಔಷಧಿ ಸೇವನೆ ಬಗ್ಗೆ ಶಿಕ್ಷಣ ನೀಡಬೇಕಾದ ಹೊಣೆಗಾರಿಕೆ ಇದೆ' ಎಂದು ಕ್ರೀಡಾಸಚಿವ ಗಿಲ್ ಹೇಳಿದ್ದಾರೆ.

